ಸುಮ್ನ ನೋಡ್ಕೋತ ನಿಂತಿದ್ರು. ಒಂದ್ ವರ್ಷದಿಂದ ನಮ್ಮನೀಗೆ ಯಾಕ ಬಂದಿಲ್ಲ ಅಂತ ಜೋರಾಗಿ ಒದರಿ ಕೇಳಬೇಕು ಅನ್ನಿಸ್ತು. ಆದ್ರ ಓಣಿ ನಾಯಿಗೋಳು ಬಿಡಲೇ ಇಲ್ಲ.' ನನಗರಿವಿಲ್ಲದೆ ನನ್ನ ಕೈಗಳು ಅವಳ ನೆತ್ತಿ ಸವರುತ್ತಿದ್ದವು.

ಎಲ್ಲ ಅಚಾನಕ್, ಅತಿರೇಕಗಳ ಹಿಂದೆ ಹೀಗೊಂದು ಕರಾಳ ಇತಿಹಾಸವಿದ್ದೇ ಇರುತ್ತದೆಯೇನೋ. ಆಕೆಯನ್ನು ಕರೆದುಕೊಂಡು ಮೆಟ್ಟಿಲಿಳಿಯಬೇಕೆನ್ನುವಷ್ಟರಲ್ಲಿ ಕೈ ಜಗ್ಗಿದಳು. 'ಬರ್ತಾ ಬರ್ತಾ ನಮ್ಮಮ್ಮ ಸುಂದ್ ಹೊಡದ ಕುಂತ್‌ಬಿಡ್ತಿದ್ಲು. ಯಾರರ ಎಷ್ಟರ ನಮ್ ಪಕಳಿ ಹರೀಲಿ ದಿನಾ ಅವನ್ನನ ರೆಕ್ಕೀಗತೆ ಅಂಟಸ್ಕೊಂಡು ಹಾರ್ಕೋತಿರಬೇಕು. ಈಗ ಹೇಳೇನಿ ಇನ್ನ ಆ ಅಪ್ಪ ಅನ್ನಿಸ್ಕೊಂಡಾಂವಾ ಸರ್ಟಿಫಿಕೇಟಿನ್ಯಾಗಷ್ಟ ಅಂಟ್ಕೊಂಡಿರ್ಲಿ ನಿನ್ ಸಮಾಧಾನಕ್ಕ. ಇನ್ನೇನರ ನಮ್ ಸುದ್ದೀಗ್ ಬಂದಾ ಅಂದ್ರ ರೆಕ್ಕಿ ಹೋಗಿ ಖಡ್ಗಾನ ಆಕ್ಕೇತಿ ಮತ್ ಅಂದಿದ್ದೆ!' ಸ್ವಲ್ಪೇ ಅಂತರದಲ್ಲಿ ಅವಳ ಕಿವಿಯ ಪಕ್ಕ ಕಪ್ಪು ಬಾವಲಿಯೊಂದು ಹಾರಿ ಹೋಯಿತು. ಹೇಗಿವಳ ಕುದಿ ಇಳಿಸುವುದೆಂದು ಒಂದೊಂದೇ ಮೆಟ್ಟಿಲು ಇಳಿಯಹತ್ತಿದೆ. ಅವಳೂ ಹಿಂಬಾಲಿಸಿದಳು. ಆ ದಿನ ಇವಳು ಬಚ್ಚಲುಮನೆಗೆ ಹೋದಾಗ ಇವಳಮ್ಮ ಸಣ್ಣಮುಖ ಮಾಡಿಕೊಂಡು, 'ಇಪ್ಪತ್ತಾದ್ರೂ ಒಬ್ಬಾರ ಒಬ್ಬಾ ನನ್ ಮಗಳ ಮನಸನ್ನ ಅರಳಿಸ್ಯಾನಲ್ಲ ಅಂತ ಕಾದ ಕಾದೇ ಆದ್ರ...' ಆದ್ರ ಬಾತ್ರೂಮಿನ ಚಿಲಕ ಮಾತು ಬೇರೆ ಕಡೆ ತಿರುಗುವಂತೆ ಮಾಡಿತ್ತು. ಅದನ್ನೇ ಈಗಿಲ್ಲಿ ವಾಪಸು ತಿರುಗಿಸಿಕೊಂಡರೆ ಹೇಗೆ ಎನ್ನಿಸಿತು.

'ಹೇಯ್ ಶಾಕು, ನೋಡಲ್ಲಿ ಆ ಚಂದಪ್ಪ ಆಗಿಂದ ನಮ್ ಮಾತು ಅದೆಷ್ಟ ಲಕ್ಷ್ಯಗೊಟ್ ಕೇಳಿಸ್ಕೊಳ್ಳಾತಾನು? ಅಂಥಾ ಥಂಪನಾಂವೊಬ್ಬ ನಮಗೂ ಬೇಕು ಅನ್ನೂದಿಲ್ಲಾ? ನಾನಂತೂ ತುದೀಗಾಲ್‌ಮ್ಯಾಲ್ ನಿಂತೇನ್ವಾ, ಹೇಳು ನಿನ್ ಹುಡುಗಾ ಹ್ಯಾಂಗಿರಬೇಕು ಅಂತ.' ಅವಳು ಆಕಾಶಕ್ಕೆ ಮುಖಮಾಡಿ ನಕ್ಷತ್ರಗಳೂ ಅದುರುವಂತೆ ನಕ್ಕಳು. ಅದೇ ಬಾವಲಿಯೋ ಮತ್ತೊಂದೋ ಗೊತ್ತಿಲ್ಲ, ನನ್ನ ತಲೆಮೇಲೆ ಹಾರಿಹೋಯಿತು. ಇದ್ದಕ್ಕಿದ್ದಂತೆ ತನ್ನ ಚೂಡಿಯೊಳಗಿನಿಂದ ಕೈ ಹಾಕಿ ಬೆನ್ನ ಹಿಂದಿನ ಬ್ರಾ ಹುಕ್ಕನ್ನು ಪಟ್ಟನೆ ಬಿಚ್ಚಿಕೊಂಡಳು! 'ಐ ಜಸ್ಟ್ ಹೇಟ್' ತಗ್ಗಿದ ಧ್ವನಿಯೊಂದಿಗೆ ಭುಜದ ಬಳಿಯ ಸ್ಟ್ರ್ಯಾಪ್ ಎಳೆದುಕೊಂಡಳು. ಸಣ್ಣಗೆ ಬೆವರಿದೆ. ಈ ಅಪರಾತ್ರಿಯಲ್ಲಿ ಇದಿನ್ನೇನಾದರೂ ತಿರುವು ಪಡೆದುಕೊಳ್ಳದಿದ್ದರೆ ಸಾಕು ಅಂದುಕೊಳ್ಳುತ್ತ ಬೇಕೆಂತಲೇ ಒಂದರಮೇಲೊಂದು ಆಕಳಿಕೆ ತಂದುಕೊಂಡೆ.

ಮಹಡಿಯಿಂದಿಳಿದು ಮನೆಯೊಳಗೆ ಬಂದಾಗ, ನೀನು ದೀವಾನಾ ಮೇಲೆ ಮಲಗು ನಾನು ಕೋಣೆಯಲ್ಲಿ ಮಲಗುತ್ತೇನೆ ಅಂತ ಆಕೆಯೇ ಹೇಳಿದಾಗ ದೊಡ್ಡ ಬೆಟ್ಟ ಕ್ಷಣದಲ್ಲಿ ಒಣ ಹುಲ್ಲಿನಂತೆ ಹಾರಿಹೋದಂತಾಯಿತು. ಆದರೂ ಶಾಕಾಂಬರಿ ಮತ್ತವಳ ಅಮ್ಮನ ಪರಿಸ್ಥಿತಿ ನೆನೆದು ನಿದ್ರೆಯೇ ಬರಲಿಲ್ಲ; ಅವಳ ಅಮ್ಮನ ಎದೆ ಬೇಗನೇ ಬತ್ತಿದಾಗ ಹಾಲು ತರಲೂ ಹಣವಿಲ್ಲದಂಥ ಪರಿಸ್ಥಿತಿಯಲ್ಲಿ ಖಾಲೀ ಔಷಧಿಬಾಟಲಿಗೆ ಅಕ್ಕಿಹಿಟ್ಟಿನ ತೆಳುಗಂಜಿ ಸುರಿದು, ನಿಪ್ಪಲ್ಲಿನ ತೂತು ತುಸು ದೊಡ್ಡದು ಮಾಡಿ ಚೀಪಿಸುತ್ತಿದ್ದದ್ದು, ಆದರೂ ಎದೆಗಾವು ನೆನೆಸಿಕೊಂಡು ಶಾಕಾಂಬರಿ ರಚ್ಚೆ ಹಿಡಿದಾಗೆಲ್ಲ ಅವಳ ಅಮ್ಮ ಜೋರುಜೋರಾಗಿ ನಗುತ್ತಿದ್ದದ್ದು, ಕ್ರಮೇಣ ಶಾಕಾಂಬರಿಯೂ ಅಮ್ಮನಿಗಿಂತ ಜೋರಾಗಿ ಕೇಕೇ ಹೊಡೆದು ನಗಲು ಕಲಿತಿದ್ದು, ಆಕೆ ಹೆದರಿ ಕಂಗಾಲಾದಾಗೆಲ್ಲ ಅಮ್ಮನೇ ಟೆಡ್ಡಿ ಬಾರ್ಬಿಯಾಗುತ್ತಿದ್ದದ್ದು...

ಏನಿದ್ದರೂ ಬೆಳೆಯುತ್ತವೆ ಏನಿಲ್ಲದಿದ್ದರೂ ಬೆಳೆಯುತ್ತವೆ ಮಕ್ಕಳು, ಬೆಳೆಯುತ್ತ ಬೆಳೆಯುತ್ತ ನಿಗೂಢವಾಗುವುದು ಮಾತ್ರ ಎಷ್ಟೋ ಸಲ ಗೊತ್ತೇ ಆಗುವುದಿಲ್ಲ.

ಕೋಣೆಯೊಳಗೆ ಶಾಕಾಂಬರಿ ಯಾವುದೋ ಕಾಮಿಡಿ ಸಿನಿಮಾ ನೋಡುತ್ತ ತನ್ನಷ್ಟಕ್ಕೆ ತಾ ಮುಸುಮುಸು ನಗುತ್ತಿದ್ದಳು. ಸದ್ಯ ದೇವಿ ಶಾಂತಳಾದಳು! ನನ್ನ ಕಣ್ಣೆಳೆಯಹತ್ತಿದವು, ಇನ್ನೇನು